## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಪ್ರಮುಖ ಅನುಷ್ಠಾನ ಇಲಾಖೆಗಳ ಒಗ್ಗೂಡಿಸುವಿಕೆಯೊಂದಿಗೆ ಜಲಾಮೃತ ಯೋಜನೆಯನ್ನು ಅನುಷ್ಠಾನಿಸಲು ಮತ್ತು ಮೇಲ್ವಿಚಾರಣೆ ಮಾಡಲು ರಚಿಸಿರುವ ವಿವಿಧ ಹಂತದಲ್ಲಿ ಸಮಿತಿಗಳನ್ನು **"ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ"**ಗಳೆಂದು ಮರು ನಾಮಕರಣಗೊಳಿಸುವ ಬಗ್ಗೆ.

ಓದಲಾಗಿದೆ:
1. ದಿನಾಂಕ: 11-03-2019 ಮತ್ತು 12-03-2019ರಂದು "ಜಲಾಮೃತ" ಯೋಜನೆಯ ಮಾರ್ಗಸೂಚಿ ಕೈಪಿಡಿಯನ್ನು ತಯಾರಿಸುವ ನಿಟ್ಟಿನಲ್ಲಿ ANSSIRD ಮೈಸೂರು ತರಬೇತಿ ಸಂಸ್ಥೆಯಲ್ಲಿ ಆಯೋಜಿಸಿರುವ ಕಾರ್ಯಾಗಾರ.
2. ಸರ್ಕಾರ ಆದೇಶ ಸಂಖ್ಯೆ: ಗ್ರಾಅಪ 31 ಉಖಾಯೋ 2019 ಬೆಂಗಳೂರು ದಿನಾಂಕ: 07-03-2019.
3. ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರರವರು 2019-20ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಘೋಷಿಸಿದ ರೀತ್ಯಾ.
4. 2019ನೇ ವರ್ಷವನ್ನು ರಾಜ್ಯ ಸರ್ಕಾರದಿಂದ "ಜಲವರ್ಷ" (Year of Water) ಎಂದು ದಿನಾಂಕ: 25-02-2019 ರಂದು ಸಚಿವ ಸಂಪುಟ ನಿರ್ಧರಿಸಿರುವ ಅನುಮೋದನೆ ಪ್ರತಿ.
5. ಜಲಾಮೃತ ಯೋಜನೆ ಅನುಷ್ಠಾನದ ಮಾರ್ಗಸೂಚಿ ಕೈಪಿಡಿಯ ಸಂಖ್ಯೆ: ಗ್ರಾಅಪ 21 ಉಖಾಯೋ 2019 ದಿನಾಂಕ: 03-05-2019
6. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ: 21 ಉಖಾಯೋ 2019, ಬೆಂಗಳೂರು, ದಿನಾಂಕ: 21-05-2019.

~~~~~~

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ದೇಶದಲ್ಲಿಯೇ ಎರಡನೆಯ ಅತೀ ಹೆಚ್ಚು ಒಣ ಭೂಮಿ ಹೊಂದಿರುವ ರಾಜ್ಯವಾಗಿರುತ್ತದೆ ಹಾಗೂ ಕರ್ನಾಟಕ ರಾಜ್ಯ ಪದೇ ಪದೇ ಬರಪರಿಸ್ಥಿತಿಯನ್ನು ಎದುರಿಸುತ್ತಿದೆ. 2011 ರಿಂದ 2018ರ ಅವಧಿಯಲ್ಲಿ ಪ್ರತಿ ವರ್ಷವು ರಾಜ್ಯದ ಬಹಳಷ್ಟು ತಾಲ್ಲೂಕುಗಳು ಬರಪೀಡಿತವೆಂದು ಘೋಷಿತವಾಗಿರುತ್ತದೆ. ರಾಜ್ಯದಲ್ಲಿ ಬರಪರಿಸ್ಥಿತಿಯನ್ನು ಎದುರಿಸಲು ಓದಲಾದ (3) ಮತ್ತು (4)ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು 2019-20ನೇ ಸಾಲಿನ ಆಯವ್ಯಯದಲ್ಲಿ 2019ನ್ನು "ಜಲವರ್ಷ"ವೆಂದು ಘೋಷಿಸಿದ್ದು, "ಜಲಾಮೃತ" ಯೋಜನೆಯಡಿ ಜಲಸಂರಕ್ಷಣೆ, ಜಲಸಾಕ್ಷರತೆ, ಜಲಮೂಲಗಳ ಪುನಶ್ಚೇತನ ಮತ್ತು ಹಸಿರೀಕರಣವನ್ನು ಕೇಂದ್ರವಾಗಿಟ್ಟುಕೊಂಡು ಜಲಸಂರಕ್ಷಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದರ ಜೊತೆಗೆ ಸುಮಾರು 20000 ಜಲಸಂರಕ್ಷಣ ಕಾಮಗಾರಿಗಳನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಕಾಮಗಾರಿಗಳಡಿ ಮುಂಬರುವ ಎರಡು ವರ್ಷಗಳಲ್ಲಿ ಅನುಷ್ಠಾನಿಸಲು ಉದ್ದೇಶಿಸಿದೆ.

"ಜಲಾಮೃತ" ಯೋಜನೆಯನ್ನು ಸಮುದಾಯ ಚಾಲಿತ ಸಮಗ್ರ ಕಾರ್ಯಕ್ರಮವನ್ನಾಗಿ ಅನುಷ್ಠಾನಿಸುವ ಬಗ್ಗೆ ಓದಲಾದ (2)ರಲ್ಲಿ ಈಗಾಗಲೇ ಸರ್ಕಾರಿ ಆದೇಶವನ್ನು ಹೊರಡಿಸಿದ್ದು, ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸುವ ನಿಟ್ಟಿನಲ್ಲಿ ಓದಲಾದ (1)ರಲ್ಲಿ ರಾಜ್ಯ/ಜಿಲ್ಲೆ/ತಾಲ್ಲೂಕು/ಗ್ರಾಮ ಪಂಚಾಯತಿಯ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು, ನೀರಿನ ಸಂರಕ್ಷಣಾ ಚಟುವಟಿಕೆ ತಜ್ಞರು, ಪರಿಣಿತರು, ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಸಿ.ಎಸ್.ಆರ್ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡ ಕಾರ್ಯಾಗಾರಗಳನ್ನು ಆಯೋಜಿಸಿ, "ಜಲಾಮೃತ" ಯೋಜನೆಯ ಮಾರ್ಗಸೂಚಿಗಳ ಕುರಿತು ಚರ್ಚಿಸಲಾಗಿದೆ.

ಉಲ್ಲೇಖ-6 ರಲ್ಲಿ "ಜಲಾಮೃತ" ಯೋಜನೆಯನ್ನು ಕ್ಷೇತ್ರ ಮಟ್ಟದಲ್ಲಿ ಪರಿಣಾಮಕಾರಿ ಹಾಗೂ ಸಮರ್ಪಕವಾಗಿ ಅನುಷ್ಠಾನಿಸಲು ಮತ್ತು ಮೇಲ್ವಿಚಾರಣೆ ನಡೆಸಲು ವಿವಿಧ ಸಮಿತಿಗಳನ್ನು ರಚಿಸಿ ಆದೇಶಿಸಿದೆ. ಮುಂದುವರೆದು, 2018-19 ಸಾಲಿನ ಅಯವ್ಯಯದ ಭಾಷಣದಲ್ಲಿ ಘೋಷಣೆಯಾದ ಹಸಿರು ಕರ್ನಾಟಕ ಕಾರ್ಯಕ್ರಮ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದೊಂದಿಗೆ ವಿವಿಧ ಇಲಾಖೆಗಳ ಸ್ವಭಾಗತ್ವದೊಂದಿಗೆ ವಿವಿಧ ಹಂತದ ಸಮಿತಿಗಳನ್ನು ರಚಿಸುವ ಸಮಯದಲ್ಲಿ ಹೊಸ ಸಮಿತಿಗಳನ್ನು ರಚಿಸುವ ಬದಲಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಜಲಾಮೃತ ಯೋಜನೆಯ ವಿವಿಧ ಹಂತದ ಸಮಿತಿಗಳಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುವುದರಿಂದ ಹಾಗೂ ಜಲಾಮೃತ ಯೋಜನೆಯ ಪ್ರಮುಖ ಉದ್ದೇಶಗಳಲ್ಲಿ ಹಸಿರುಕರಣವು ಒಂದು ಉದ್ದೇಶವಾಗಿರುತ್ತದೆ. ಅದುದರಿಂದ, ಉಲ್ಲೇಖ-6 ರಲ್ಲಿ ಆದೇಶಿಸಿದ ಜಲಾಮೃತ
~~~~~~

ಯೋಜನೆಯ ವಿವಿಧ ಹಂತದ ಸಮಿತಿಗಳನ್ನು "ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ"ಗಳೆಂದು ಮರು ನಾಮಕರಣಗೊಳಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಅಪಜೇ 108 ಎಫ್‌ಎಪಿ 2018, ದಿನಾಂಕ: 10-02-2021**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪ್ರಮುಖ ಅನುಷ್ಠಾನ ಇಲಾಖೆಗಳು, ಪಾಲುದಾರ ಸಂಸ್ಥೆಗಳು, ಪರಿಣಿತರು, ಪ್ರತಿಷ್ಠಿತ ವ್ಯಕ್ತಿಗಳು ಹಾಗೂ ಸಂಘ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳನ್ನು ಒಳಗೊಂಡಂತೆ **"ಜಲಾಮೃತ"** ಯೋಜನೆಯನ್ನು ಹಾಗೂ **"ಹಸಿರು ಕರ್ನಾಟಕ"** ಯೋಜನೆಯನ್ನು ಒಗ್ಗೂಡಿಸುವಿಕೆ ಮೂಲಕ ಕರ್ನಾಟಕ ರಾಜ್ಯಾದ್ಯಂತ ಜಾರಿ ಮಾಡಲು ವಿವಿಧ ಹಂತದ ಮೇಲ್ವಿಚಾರಣೆ ನಡೆಸಲು ಕೆಳಕಂಡ ಸಮಿತಿಗಳನ್ನು ರಚಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಲು ಹರ್ಷಿಸುತ್ತದೆ.

## 1. ಗ್ರಾಮ ಪಂಚಾಯತಿ ಮಟ್ಟದ ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ" ಯೋಜನೆಯ ಸಮಿತಿ ರಚನೆ:

ಕರ್ನಾಟಕ ಗ್ರಾಮ ಸ್ವರಾಜ್ ಕಾಯ್ದೆಯ ಕಲಂ 61ಎ ರ ಅನುಸಾರ ಪ್ರತಿ ಗ್ರಾಮ ಪಂಚಾಯತಿಗೆ ಒಂದು "ಗ್ರಾಮ ಪಂಚಾಯತಿ **"ಜಲಾಮೃತ ಮತ್ತು ಹಸಿರು ಕರ್ನಾಟಕದ ಸಮಿತಿ"**ಯನ್ನು ಗ್ರಾಮ ಪಂಚಾಯತಿಯ ಉಪಸಮಿತಿ ಎಂದು ರಚಿಸಲಾಗಿದೆ. ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸದರಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಗ್ರಾಮ ಪಂಚಾಯತಿ **"ಜಲಾಮೃತ ಮತ್ತು ಹಸಿರು ಕರ್ನಾಟಕದ ಸಮಿತಿ"**ಯು 3-5 ಗ್ರಾಮ ಪಂಚಾಯತಿ ಸದಸ್ಯರನ್ನು ಸೇರಿಸಿ, 9 ರಿಂದ 15 ಸದಸ್ಯರು ಇರುವ ಕೆರೆ ಬಳಕೆದಾರರ ಸಂಘ ರಚಿಸುವುದು. ಜಲಾನಯನ ಅಭಿವೃದ್ಧಿ ಸಂಘದ ಸ್ಥಾಯಿ ಸಮಿತಿಯ ಇಬ್ಬರನ್ನು ಕೆರೆ ಅಭಿವೃದ್ಧಿ ಬಳಕೆದಾರರ ಸಂಘಕ್ಕೆ ನೇಮಿಸುವುದು ಹಾಗೂ ಆಸಕ್ತಿಯುಳ್ಳ ಚುನಾಯಿತ ಪ್ರತಿ ನಿಧಿಯನ್ನು ಅಧ್ಯಕ್ಷರನ್ನಾಗಿ ನೇಮಿಸುವುದು. ಸದರಿ ಸಂಘದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರನ್ನು ಸಂಘದ ಕಾರ್ಯದರ್ಶಿಯನ್ನಾಗಿ ನೇಮಕ ಮಾಡುವುದು. ಗ್ರಾಮ ಲೆಕ್ಕಿಗರು, ಕೃಷಿ ಸಹಾಯಕರು, ಪಂ.ರಾ.ಇಂ. ಇಲಾಖೆಯ ಸಹಾಯಕ/ಕಿರಿಯ ಇಂಜಿನಿಯರ್ ಕೃಷಿ/ತೋಟಗಾರಿಕೆ ಸಹಾಯಕರು, ಗ್ರಾಮಗಳ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಸ್ಥಳೀಯ ಸಂಘಗಳ ಸದಸ್ಯರು ಅಂದರೆ ಯುವಕ ಮಂಡಳಿ, ಸರ್ಕಾರೇತರ ಸಂಸ್ಥೆಗಳು ಅಥವಾ ಜಲಸಂರಕ್ಷಣೆಯಲ್ಲಿ ಆಸಕ್ತಿ ಇರುವ ಯಾವುದೇ ದಾನಿಗಳು ಇರುತ್ತಾರೆ.

**ಜವಾಬ್ದಾರಿಗಳು:**

- ಗ್ರಾಮ ಪಂಚಾಯತಿಗೆ ಅವಶ್ಯವಾದ ವಿವರವಾದ ಜಲ ಆಯವ್ಯಯವನ್ನು ಗ್ರಾಮದ ಪರಿಣತರು, ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ತಯಾರಿಸುವುದು.
- ಯೋಜನೆಗಳ ಅನುಷ್ಠಾನ (a) ಗ್ರಾಮ ಪಂಚಾಯತಿಯಲ್ಲಿರುವ ಜಲಮೂಲಗಳ ಪುನರುತ್ಥಾನ, ಕಾಲುವೆಗಳು ಮತ್ತು ಝರಿಗಳ ಪುನರ್‌ವಸತಿ ಕಲ್ಪಿಸುವುದು (b) ಚೆಕ್‌ಡ್ಯಾಂ, ವೆಂಟೆಡ್ ಡ್ಯಾಮ್ಸ್ ಮತ್ತು ಸಣ್ಣ ಜಲಾಶಯಗಳ ನಿರ್ಮಾಣ, (c) ಭೂ ಸಂರಕ್ಷಣೆ ಮತ್ತು ಜಲಚಲನೆಯನ್ನು ತಡೆಯುವ ಸಲುವಾಗಿ ಮರಗಳ ನೆಡುವಿಕೆ ಮತ್ತು (d) IEC ಜಲಸಾಕ್ಷರತೆ ಕುರಿತಾದ ಚಟುವಟಿಕೆಗಳನ್ನು ಆಯೋಜಿಸುವುದು.
- ಮಣ್ಣು ಮತ್ತು ನೀರು ಸಂರಕ್ಷಣಾ ಚಟುವಟಿಕೆಯಲ್ಲಿ ಜಲನಾಯನ ತತ್ವವಾದ ದಿಬ್ಬದಿಂದ ಕಣಿವೆ (Ridge to valley) ಆಧಾರದ ಮೇಲೆ ಉಪಚರಿಸುವುದು ಹಾಗೂ KSRSAC/KSCST ಸಂಸ್ಥೆಯು ನೀಡುವ ನಕ್ಷೆಯನ್ನು ಬಳಸಿ, ನಿವ್ವಳ ಯೋಜನೆಯನ್ನು ತಯಾರಿಸಿ ಅನುಮೋದನೆ ಪಡೆದು ಅನುಷ್ಠಾನಿಸುವುದು.
- ಯೋಜನೆಗಳ ಅನುಷ್ಠಾನಕ್ಕಾಗಿ ಲಭ್ಯವಿರುವ ಸಂಪನ್ಮೂಲಗಳ ತಪಶೀಲು ತಯಾರಿಕೆ.
- ಸರ್ಕಾರದ ಯೋಜನೆಗಳಾದ MGNREGA, ಕೃಷಿ ಭಾಗ್ಯ, ಕೆರೆ ಸಂಜೀವಿನಿ, ಹಸಿರು ಕರ್ನಾಟಕ ಇತ್ಯಾದಿಗಳಲ್ಲಿ ಲಭ್ಯವಿರುವ ಆರ್ಥಿಕ ಸಂಪನ್ಮೂಲಗಳನ್ನು ಯೋಜನೆಯಲ್ಲಿ ಒಗ್ಗೂಡಿಸುವುದು.
- ಕಾರ್ಪೋರೇಟ್ ವಲಯವು ಸೇರಿದಂತೆ ಸಾರ್ವಜನಿಕರ ವಂತಿಗೆ ಮತ್ತು ದಾನದಿಂದ ಹಣ ಸಂಗ್ರಹಣೆ ಮತ್ತು ಅದನ್ನು "ಜಲಾಮೃತ ಮತ್ತು ಹಸಿರು ಕರ್ನಾಟಕ"ದ ಸಲುವಾಗಿ ಗ್ರಾಮ ಪಂಚಾಯತಿಯಲ್ಲಿ ಸೃಜಿಸಲಾದ ಬ್ಯಾಂಕ್ ಖಾತೆಯಲ್ಲಿ ಜಮಾ ಇಡುವುದು ಮತ್ತು ಈ ನಿಧಿಯನ್ನು ಜಲಾನಯನ ಹಾಗೂ

ಕೆರೆಯ ಅಭಿವೃದ್ಧಿಗೆ ಗ್ರಾಮ ಪಂಚಾಯತಿಯ ಗ್ರಾಮ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆದು ಸದರಿ ಕಾಮಗಾರಿಯ ಅನುಷ್ಠಾನೋತ್ತರ ನಿರ್ವಹಣೆಗೆ ಬಳಸುವುದು.

- ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಯೋಜನೆಗಳ ಅನುಮೋದನೆಗಾಗಿ ಮಂಡಿಸುವುದು; ನಂತರ ಯೋಜನೆಗಳನ್ನು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಪರಿಶೋಧನೆ ಮತ್ತು ಅನುಮೋದನೆಗಾಗಿ ಕಳುಹಿಸುವುದು.
- ಯೋಜನೆಗಳ ಅನುಷ್ಠಾನಕ್ಕಾಗಿ ಸಂಪೂರ್ಣ ಗ್ರಾಮ ಸಭೆಯನ್ನು ಉತ್ತೇಜಿಸುವುದು; ಜಲಸಂರಕ್ಷಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ MPLAD, MLA/MLC LAD, ಕಾರ್ಪೋರೇಟ್ ದಾನಗಳು ಇತ್ಯಾದಿ ಮೂಲಗಳಿಂದ ಹಣ ಸಂಗ್ರಹಿಸಲು ಗ್ರಾಮ ಪಂಚಾಯತಿ ವ್ಯಾಪ್ತಿಯ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಲೋಕಸಭಾ ಸದಸ್ಯರು /MLA/MLC ಗಳನ್ನು ಸಂಪರ್ಕಿಸುವುದು.
- ಈ ಸಮಿತಿಯು ಪ್ರತಿ 15 ದಿನಕ್ಕೊಮ್ಮೆ ಸಭೆ ಸೇರಿ ಯೋಜನೆಯ ಅನುಷ್ಠಾನದ ಪ್ರಗತಿ ಬಗ್ಗೆ ಚರ್ಚಿಸುವುದು.

**2. <u>ತಾಲ್ಲೂಕು ಮಟ್ಟದ ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ"ಯೋಜನೆ ಸಮಿತಿಯ ರಚನೆ:</u>**

| | | |
|---|---|---|
| 1 | ಸಂಬಂಧಪಟ್ಟ ಕಂದಾಯ ಉಪ ವಿಭಾಗದ ಸಹಾಯಕ ಆಯುಕ್ತರು | ಅಧ್ಯಕ್ಷರು |
| 2 | ಸಹಾಯಕ ನಿರ್ದೇಶಕರು – ಮಹಾತ್ಮ ಗಾಂಧಿ ನರೇಗಾ/ಕೃಷಿ/ ತೋಟಗಾರಿಕೆ/ರೇಷ್ಮೆ/ಜಲಾನಯನ/ಪಶುಸಂಗೋಪನೆ/ಮೀನುಗಾರಿಕೆ | ಸದಸ್ಯರು |
| 3 | ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ | ಸದಸ್ಯರು |
| 4 | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ. | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಇಲಾಖೆ | ಸದಸ್ಯರು |
| 6 | ಸರ್ಕಾರೇತರ ಸಂಸ್ಥೆಗಳ ಆಯ್ದ ಸದಸ್ಯರು / ಜಲ ಮತ್ತು ಭೂ ಸಂರಕ್ಷಣೆ ಕೆಲಸಗಳಲ್ಲಿ ಆಸಕ್ತ ಸ್ಥಳೀಯ ಸಂಘಗಳು. | ಸದಸ್ಯರು |
| 7 | ಜಲ ಸಂರಕ್ಷಣೆ ಮತ್ತು ಭೂ ಸಂರಕ್ಷಣೆ ಕೆಲಸಗಳನ್ನು ನಿರ್ವಹಿಸಿದ ಪ್ರತಿಷ್ಠಿತ ವ್ಯಕ್ತಿಗಳು/ಪರಿಣಿತರು ಸಂಘ ಸಂಸ್ಥೆಗಳ ಪ್ರತಿನಿಧಿಗಳು (ಒಟ್ಟು 3 ರಿಂದ 4) (ಜಿಲ್ಲಾ ಸಮಿತಿಯಿಂದ ನಾಮ ನಿರ್ದೇಶನ ಮಾಡತಕ್ಕದ್ದು). | ಸದಸ್ಯರು |
| 8 | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ | ಸದಸ್ಯ ಕಾರ್ಯದರ್ಶಿ |

**ಜವಾಬ್ದಾರಿಗಳು:**

- ತಾಲ್ಲೂಕಿನ ಒಟ್ಟಾರೆ ಸ್ಥೂಲ ಸ್ಥಿತಿಯ ಬಗ್ಗೆ ವಿವರಣಾತ್ಮಕ ಕೋಶ ಹೊಂದುವುದು.
- ವಿವಿಧ ಅನುಷ್ಠಾನ ಇಲಾಖೆಗಳನ್ನು ಒಗ್ಗೂಡಿಸುವುದು ಮತ್ತು ಸಮನ್ವಯತೆ ಸಾಧಿಸುವುದು.
- ಪಂಚಾಯತ್ ಘಟಕಕ್ಕೆ ಬೇಕಾದ IEC, ಜಲ ಸಾಕ್ಷರತೆ ಮತ್ತಿತರ ಅಗತ್ಯ ಪರಿಕರಗಳನ್ನು ಒದಗಿಸುವುದು.
- ಗ್ರಾಮ ಪಂಚಾಯತಿ **"ಜಲಾಮೃತ ಮತ್ತು ಹಸಿರು ಕರ್ನಾಟಕ"**ದ ಸಮಿತಿಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮತ್ತು ಸಮನ್ವಯ.
- ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ತಯಾರು ಮಾಡುವುದು. ಈ ಪರಿಣಿತರು ಗ್ರಾಮ ಪಂಚಾಯತಿಗಳ ಅಗತ್ಯಕ್ಕೆತಕ್ಕಂತೆ ಮಾರ್ಗದರ್ಶನ ನೀಡಲು ಸಹಾಯ ಮಾಡುವುದು.
- ಸಂಪೂರ್ಣ ತಾಲ್ಲೂಕಿನಲ್ಲಿ ತಾಂತ್ರಿಕತೆ ಮತ್ತು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಪರಿಣತಿಯನ್ನು ಬಳಸಿಕೊಂಡು ಜಲ ಸಂರಕ್ಷಣೆ ಯೋಜನೆ ರೂಪಿಸುವುದು, ಜನಸಾಮಾನ್ಯರು, ಸರ್ಕಾರೇತರ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿಗಳು, ಇತರೆ ಸಾರ್ವಜನಿಕ ಪ್ರತಿನಿಧಿಗಳ ಜೊತೆ ಸಮಾಲೋಚನೆ ನಡೆಸುವುದು.

- ಸಂಪೂರ್ಣ ತಾಲ್ಲೂಕಿಗೆ ಜಲ ಆಯವ್ಯಯವನ್ನು ತಯಾರಿಸುವುದು ಮತ್ತು ಇಡೀ ತಾಲ್ಲೂಕಿನ ಗ್ರಾಮ ಪಂಚಾಯತಿಗಳು ತಯಾರಿಸಿದ ಜಲ ಸಂರಕ್ಷಣೆ ಯೋಜನೆಗಳನ್ನು ಪರಿಶೀಲಿಸಿ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
- ಹಂತಹಂತವಾಗಿ ತಾಲ್ಲೂಕಿನಾದ್ಯಂತ ಕೈಗೊಳ್ಳಬೇಕಾದ ಜಲ ಸಂರಕ್ಷಣೆ ಚಟುವಟಿಕೆಗಳನ್ನು ಎಂ.ಜಿ.ಎನ್.ಆರ್.ಇ.ಜಿ.ಎ, ಕೃಷಿ ಭಾಗ್ಯ, **"ಜಲಾಮೃತ ಮತ್ತು ಹಸಿರು ಕರ್ನಾಟಕ"**ದ ಇತ್ಯಾದಿಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಅನುಷ್ಠಾನಗೊಳಿಸುವುದು.
- ಜಲ ಸಂರಕ್ಷಣೆಯ ಪ್ರಚಾರದಲ್ಲಿ ಸಮುದಾಯವನ್ನು ಪ್ರೇರೇಪಿಸುವುದು, ಕೆರೆಗಳು ಮತ್ತು ಜಲ ಮೂಲಗಳಲ್ಲಿನ ಹೂಳನ್ನು ತೆಗೆಯುವುದು; ನಿಧಿ ಸಂಗ್ರಹಣೆ; ಮತ್ತು ತಾಲ್ಲೂಕಿನಲ್ಲಿ ಜಲ ಸಂರಕ್ಷಣೆ ಚಳುವಳಿಯ ಮುಂದಾಳತ್ವ ವಹಿಸುವುದು.
- ಯಶೋಗಾಥೆ ಮತ್ತು ಉತ್ತಮ ಮಾದರಿಗಳ ಒಂದು ಡಿಜಿಟಲ್ ಸಂಗ್ರಹ ಹೊಂದುವುದು ಮತ್ತು ಇದನ್ನು ಪಂಚಾಯತಿ ಸಮಿತಿಗಳಲ್ಲಿ ತೋರಿಸಿ ಅನುಷ್ಠಾನ ಸಾಧ್ಯತೆ ಕುರಿತು ಚರ್ಚಿಸುವುದು.
- ಈ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ತಾಲ್ಲೂಕಿನ ಎಲ್ಲಾ ಪಂಚಾಯತಿ ಮಟ್ಟದ ಸಮಿತಿಗಳ ಪ್ರಾತಿನಿಧಿಕ ಸಭೆಯನ್ನು ಕರೆದು ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಪರಸ್ಪರ ವಿಶ್ಲೇಷಿಸಲು ವೇದಿಕೆ ನಿರ್ಮಿಸುವುದು. ಸಭೆಯ ನಡವಳಿಯ ಪ್ರತಿಯನ್ನು ಜಿಲ್ಲಾ ಮಟ್ಟಕ್ಕೆ ಸಲ್ಲಿಸುವುದು.

**3. ಜಿಲ್ಲಾ ಮಟ್ಟದ "ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ" ಯೋಜನೆಯ ಸಮಿತಿ ರಚನೆ:**

| | | |
|---|---|---|
| 1 | ಜಿಲ್ಲಾಧಿಕಾರಿ | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಸಹ ಅಧ್ಯಕ್ಷರು |
| 3 | ಕೃಷಿ, ಜಲಾನಯನ, ಪಶುಸಂಗೋಪನೆ, ತೋಟಗಾರಿಕೆ ಮೀನುಗಾರಿಕೆ, ರೇಷ್ಮೆ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು | ಸದಸ್ಯರು |
| 4 | ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) | ಸದಸ್ಯರು |
| 5 | ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು | ಸದಸ್ಯರು |
| 6 | ಸಾಮಾಜಿಕ ಅರಣ್ಯ ವಿಭಾಗದ ಉಪ ಸಂರಕ್ಷಣಾಧಿಕಾರಿ | ಸದಸ್ಯರು |
| 7 | ಜಿಲ್ಲೆಯ ಕಂದಾಯ ಉಪ ವಿಭಾಗಗಳ ಸಹಾಯಕ ಆಯುಕ್ತರು | ಸದಸ್ಯರು |
| 8 | ಯುವಜನ ಸೇವಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ | ಸದಸ್ಯರು |
| 9 | ಜಲ ಸಂರಕ್ಷಣೆ ಮತ್ತು ಭೂ ಸಂರಕ್ಷಣೆ ಕೆಲಸಗಳನ್ನು ನಿರ್ವಹಿಸಿದ ಪ್ರತಿಷ್ಠಿತ ವ್ಯಕ್ತಿಗಳು/ಪರಿಣಿತರು ಸಂಘ ಸಂಸ್ಥೆಗಳ ಪ್ರತಿನಿಧಿಗಳು (ಒಟ್ಟು 3 ರಿಂದ 4) (ಜಿಲ್ಲಾ ಸಮಿತಿಯಿಂದ ನಾಮ ನಿರ್ದೇಶನ ಮಾಡತಕ್ಕದ್ದು.) | ಸದಸ್ಯರು |
| 10 | ಯೋಜನಾ ನಿರ್ದೇಶಕರು, ಎನ್.ಆರ್.ಇ.ಜಿ.ಎ. | ಸದಸ್ಯ ಕಾರ್ಯದರ್ಶಿ |

**ಜವಾಬ್ದಾರಿಗಳು:**

- ಜಿಲ್ಲೆಯ ಒಟ್ಟಾರೆ ಸ್ಥೂಲ ಸ್ಥಿತಿಯ ಬಗ್ಗೆ ವಿವರಣಾತ್ಮಕ ಕೋಶ ಹೊಂದುವುದು.
- ವಿವಿಧ ಅನುಷ್ಠಾನ ಇಲಾಖೆಗಳನ್ನು ಒಗ್ಗೂಡಿಸುವುದು ಮತ್ತು ಸಮನ್ವಯತೆ ಸಾಧಿಸುವುದು.
- ಜಿಲ್ಲೆಯಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುವ ಎಲ್ಲಾ ಜಲ ಸಂರಕ್ಷಣೆ ಕಾಮಗಾರಿಗಳ ಸಮನ್ವಯ ಮತ್ತು ಮೇಲ್ವಿಚಾರಣೆ ನಡೆಸುವುದು.
- ಗ್ರಾಮ ಪಂಚಾಯತಿಗಳ ಮೂಲಕ ತಯಾರಿಸಿದ ಜಲ ಸಂರಕ್ಷಣೆ ಯೋಜನೆ ಚಟುವಟಿಕೆಗಳನ್ನು ಸದೃಢಗೊಳಿಸುವುದು ಮತ್ತು ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿಗಳಾದ್ಯಂತ ಉಪಚರಿಸಬಹುದಾದ ದೊಡ್ಡ ಗಾತ್ರದ ಜಲ ಸಂರಕ್ಷಣಾ ಯೋಜನೆಗಳನ್ನು ತಯಾರಿಸುವುದು;
- ಪ್ರಾಯೋಜಕತ್ವವನ್ನು ಆಹ್ವಾನಿಸುವುದು, ಜಲ ಸಂಸ್ಥೆಗಳನ್ನು ಪುನರ್‌ಸ್ಥಾಪಿಸಲು ವಂತಿಗೆಗಳ ಕ್ರೋಢೀಕರಣ ಮತ್ತು ಕೆರೆ/ಕೊಳ್ಳಗಳನ್ನು ಸೌಂದರ್ಯೀಕರಿಸುವುದು ಸೇರಿದಂತೆ ಜಲ ಸಂರಕ್ಷಣೆಯ ಯೋಜನೆಗಳನ್ನು ಕೈಗೊಳ್ಳಲು ಸಮುದಾಯವನ್ನು ಉತ್ತೇಜಿಸುವುದು;

* ಪ್ರತಿ ತಿಂಗಳಿಗೊಮ್ಮೆ ಎಲ್ಲಾ ತಾಲ್ಲೂಕು ಮಟ್ಟದ ಸಮಿತಿಗಳ ಪ್ರಾತಿನಿಧಿಕ ಸಭೆಯನ್ನು ಕರೆದು ಅನುಷ್ಠಾನದ ಪ್ರಗತಿ ಪರಿಶೀಲನೆ ನಡೆಸಿ ಸಮಸ್ಯೆಗಳು ಇದ್ದಲ್ಲಿ ಬಗೆ ಹರಿಸಲು ಕ್ರಮವಹಿಸುವುದು. ಸಭೆಯ ನಡವಳಿಯ ಪ್ರತಿಯನ್ನು ರಾಜ್ಯ ಮಟ್ಟಕ್ಕೆ ಸಲ್ಲಿಸುವುದು.

**4. ರಾಜ್ಯ ಮಟ್ಟದ "ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ"ಯೋಜನೆಯ ಸಮಿತಿ ರಚನೆ:**

| | | |
|---|---|---|
| 1 | ಮುಖ್ಯ ಮಂತ್ರಿಗಳು | ಅಧ್ಯಕ್ಷರು |
| 2 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಸದಸ್ಯರು |
| 3 | ಸಣ್ಣ ನೀರಾವರಿ ಸಚಿವರು | ಸದಸ್ಯರು |
| 4 | ಬೆಂಗಳೂರು ಅಬಿವೃದ್ಧಿ ಸಚಿವರು | ಸದಸ್ಯರು |
| 5 | ನಗರಾಭಿವೃದ್ಧಿ ಸಚಿವರು | ಸದಸ್ಯರು |
| 6 | ಪೌರಾಡಳಿತ ಸಚಿವರು | ಸದಸ್ಯರು |
| 7 | ಜಲಸಂಪನ್ಮೂಲ ಸಚಿವರು | ಸದಸ್ಯರು |
| 8 | ಕೃಷಿ ಸಚಿವರು | ಸದಸ್ಯರು |
| 9 | ಅರಣ್ಯ ಮತ್ತು ಪರಿಸರ ಸಚಿವರು | ಸದಸ್ಯರು |
| 10 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು | ಸದಸ್ಯರು |
| 11 | ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | ಸದಸ್ಯರು |
| 12 | ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ | ಸದಸ್ಯರು |
| 13 | ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ನಗರಾಭಿವೃದ್ಧಿ/ಅರಣ್ಯ ಮತ್ತು ಪರಿಸರ ಮತ್ತು ಜೀವಿಶಾಸ್ತ್ರ, ಸಣ್ಣ ನೀರಾವರಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಜಲ ಸಂಪನ್ಮೂಲ | ಸದಸ್ಯರು |
| 14 | ಪ್ರಧಾನ ಕಾರ್ಯದರ್ಶಿ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಜವಾಬ್ದಾರಿಗಳು:**

* ವಿವಿಧ ಅನುಷ್ಠಾನ ಇಲಾಖೆಗಳನ್ನು ಒಗ್ಗೂಡಿಸುವುದು ಮತ್ತು ಸಮನ್ವಯತೆ ಸಾಧಿಸುವುದು.
* ಪಾಲುದಾರರು ಅಂದರೆ; ಸಂಬಂಧಪಟ್ಟ ಇಲಾಖೆಗಳು, ವಲಯದ ಪರಿಣತರು, ಶಿಕ್ಷಣ ತಜ್ಞರು ಮತ್ತು ಸಂಶೋಧನಾ ಸಂಸ್ಥೆಗಳು, ಜಲಸಂರಕ್ಷಣ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು, ಮತ್ತು ಪಂಚಾಯತ್ ರಾಜ್ ಸಂಸ್ಥೆಗಳನ್ನು ಒಳಗಂಡಂತೆ ಜಲಸಂರಕ್ಷಣಾ ತಂತ್ರವನ್ನು ರೂಪಿಸುವುದು ಮತ್ತು ರಾಜ್ಯದಾದ್ಯಂತ ಅನುಷ್ಠಾನಗೊಳಿಸುವುದು;
* ಜಲಸಂರಕ್ಷಣೆ ಮತ್ತು ಭೂ ಪ್ರಾದೇಶಿಕ ತಂತ್ರಜ್ಞಾನದಲ್ಲಿ ವೈಜ್ಞಾನಿಕ ಮತ್ತು ತಂತ್ರಜ್ಞಾನದ ತಿಳುವಳಿಕೆ ಹೊಂದಿರುವ ಸಂಸ್ಥೆಗಳ ಸಹಾಯವನ್ನು ಪಡೆಯುವುದು;
* ಎಲ್ಲಾ ಪಾಲುದಾರರು, ಸರ್ಕಾರದ ಇಲಾಖೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಜಲಸಂರಕ್ಷಣೆ ಚಳುವಳಿಯಲ್ಲಿ ತೊಡಗಲು ನೀತಿ ಮತ್ತು ಆಯೋಜಿತ ಮಾರ್ಗದರ್ಶನ ಒದಗಿಸುವುದು;
* ಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಸಭೆ ಸೇರಿ ರಾಜ್ಯದಲ್ಲಿ "ಜಲಾಮೃತ ಮತ್ತು ಹಸಿರು ಕರ್ನಾಟಕ"ದ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸುವುದು.

5. <u>ರಾಜ್ಯ ಮಟ್ಟದ "ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ"ಯೋಜನೆಯ ಕಾರ್ಯಕಾರಿ ಸಮಿತಿ ರಚನೆ:</u>

| | | |
|---|---|---|
| 1 | ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | ಅಧ್ಯಕ್ಷರು |
| 2 | ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | ಸದಸ್ಯರು |
| 3 | ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| 4 | ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 5 | ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ | ಸದಸ್ಯರು |
| 6 | ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| 7 | ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಸದಸ್ಯರು |
| 8 | ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ | ಸದಸ್ಯರು |
| 9 | ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| 10 | ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ | ಸದಸ್ಯರು |
| 11 | KSRSAC ಮತ್ತು KSCST ಸಂಸ್ಥೆಯ ನಿರ್ದೇಶಕರು | ಸದಸ್ಯರು |
| 12 | ಜಲ ಸಂರಕ್ಷಣೆ ಮತ್ತು ಭೂ ಸಂರಕ್ಷಣೆ ಕೆಲಸಗಳನ್ನು ನಿರ್ವಹಿಸಿದ ಪ್ರತಿಷ್ಠಿತ ವ್ಯಕ್ತಿಗಳು/ಪರಿಣಿತರು ಸಂಘ ಸಂಸ್ಥೆಗಳ ಪ್ರತಿನಿಧಿಗಳು (ಒಟ್ಟು-3 ರಿಂದ 4) (ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನ ಮಾಡತಕ್ಕದ್ದು.) | ಸದಸ್ಯರು |
| 13 | ಆಯುಕ್ತರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 14 | ನಿರ್ದೇಶಕರು ಜಲಾಮೃತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಜವಾಬ್ದಾರಿಗಳು:**

- ರಾಜ್ಯದ ಒಟ್ಟಾರೆ ಸ್ಥೂಲ ಸ್ಥಿತಿಯ ಬಗ್ಗೆ ವಿವರಣಾತ್ಮಕ ಕೋಶ ಹೊಂದುವುದು.
- ಪಾಲುದಾರ ಇಲಾಖೆಗಳು/ಪಾಲುದಾರಿಕೆ ಸಂಸ್ಥೆಗಳು/ಸಂಘಗಳು ತಯಾರಿಸಿ, ಹಾಜರುಪಡಿಸಿದ ವಿವರವಾದ ಜಲಾಮೃತ ಮತ್ತು ಹಸಿರು ಕರ್ನಾಟಕದ ಯೋಜನಾ ಅನುಷ್ಠಾನ ಕಾರ್ಯಕ್ರಮಗಳನ್ನು ಅನುಮೋದಿಸುವುದು.
- ಎಲ್ಲಾ ಅನುಷ್ಠಾನಗಳ ಕಾಲನಿಗಧಿತ ಪರಿಶೀಲನೆಯೊಂದಿಗೆ **"ಜಲಾಮೃತ ಮತ್ತು ಹಸಿರು ಕರ್ನಾಟಕ"**ದ ಸಂಪೂರ್ಣ ಅನುಷ್ಠಾನದ ಮೇಲ್ವಿಚಾರಣೆ ನಡೆಸುವುದು.
- ಜಲಾಮೃತ ಪರಿಣಾಮದ ಕುರಿತು ಕಾಲನಿಗಧಿತವಾಗಿ ಮೌಲ್ಯಮಾಪನ ಮಾಡುವುದು ಮತ್ತು ನೀತಿ ಅಥವಾ ಆಯೋಜನೆ ಬದಲಾವಣೆಯ ಬಗ್ಗೆ ಸಲಹೆಗಳನ್ನು ನೀಡುವುದು.
- ರಾಜ್ಯದಲ್ಲಿ ನೆಲ ಜಲ ಸಂಪನ್ಮೂಲ ದಿನಚರಣೆಯನ್ನು ಆಯೋಜಿಸಿ ಮತ್ತು ಅನುಷ್ಠಾನ ಮಾಡುವುದು.
- ಎಲ್ಲಾ ಪಾಲುದಾರರಿಗೆ ನೀತಿ ಮತ್ತು ಆಯೋಜನೆಯ ಕುರಿತು ಮಾರ್ಗದರ್ಶನ ನೀಡುವುದು ಮತ್ತು ರಾಜ್ಯ ಮಟ್ಟದ **"ಜಲಾಮೃತ ಮತ್ತು ಹಸಿರು ಕರ್ನಾಟಕ ಸಮಿತಿ"**ಗೆ ಸಲಹೆ ಮತ್ತು ಬೆಂಬಲ ನೀಡುವುದು.
- ಈ ಸಮಿತಿಯು ಕಾಲಾನುಮಿತಿಯಲ್ಲಿ ಅಗತ್ಯಕ್ಕೆ ತಕ್ಕಂತೆ ಸಭೆಯನ್ನು ನಡೆಸುವುದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಶಿವಬಸಪ್ಪ ಎಂ.) 10/2/19
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ.
2. ಪ್ರಾದೇಶಿಕ ಆಯುಕ್ತರು, ಮೈಸೂರು, ಬೆಳಗಾವಿ, ಕಲಬುರಗಿ ಮತ್ತು ಬೆಂಗಳೂರು ವಿಭಾಗಗಳಿಗೆ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
5. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
6. ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದಲ್ಲಿ ಇರುವ ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ (ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮೂಲಕ ನೀಡುವುದು).
7. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಗಳಿಗೆ (ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮೂಲಕ ನೀಡುವುದು).

ಪ್ರತಿಯನ್ನು:

1. ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ ಬೆಂಗಳೂರು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜಿವಿಶಾಸ್ತ್ರ ಇಲಾಖೆ, 4ನೇ ಮಹಡಿ, 2ನೇ ದ್ವಾರ, 7ನೇ ಮಹಡಿ, 4ನೇ ದ್ವಾರ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, 2&3ನೇ ಮಹಡಿ, ವಿಕಾಸಸೌಧ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, 5ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು
12. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, 6&7ನೇ ಮಹಡಿ, 2&3 ದ್ವಾರ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, 6ನೇ ಮಹಡಿ, 2ನೇ ದ್ವಾರ, ಬಹುಮಹಡಿ ಕಟ್ಟಡ, ಬೆಂಗಳೂರು.
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, 4ನೇ ಮಹಡಿ, 3ನೇ ದ್ವಾರ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, 4ನೇ ಮಹಡಿ, 3ನೇ ದ್ವಾರ, ಬಹುಮಹಡಿ ಕಟ್ಟಡ ಮತ್ತು 1ನೇ ಮಹಡಿ, ವಿಕಾಸಸೌಧ, ಬೆಂಗಳೂರು.
16. ಸರ್ಕಾರದ ಕಾರ್ಯದರ್ಶಿಗಳು(ಪಂರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
17. ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ, 2&3ನೇ ಮಹಡಿ, ವಿಕಾಸಸೌಧ, ಬೆಂಗಳೂರು.
18. ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

19. ಆಯುಕ್ತರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
20. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
21. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
22. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
23. ಸರ್ಕಾರದ ಉಪ ಕಾರ್ಯದರ್ಶಿಗಳು(ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು.
24. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
25. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಗ್ರಾಮೀಣ ಭವನ ಆನಂದರಾವ್ ವೃತ್ತ, ಬೆಂಗಳೂರು.
26. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
27. ನಿರ್ದೇಶಕರು ಪಂಚಾಯತ್ ರಾಜ್ 1 & 2 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
28. ನಿರ್ದೇಶಕರು, ಎಎನ್ಎಸ್ಎಸ್ಐಆರ್‌ಡಿ, ಲಲಿತ ಮಹಲ್ ರಸ್ತೆ, ಮೈಸೂರು.
29. ನಿರ್ದೇಶಕರು ಸುವರ್ಣ ಗ್ರಾಮೋದಯ ಮತ್ತು ಗ್ರಾಮೀಣ ಮೂಲಭೂತ ಸೌಲಭ್ಯಗಳು–1
30. ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಲಭ್ಯಗಳು–2
31. ನಿರ್ದೇಶಕರು ಗ್ರಾಮ ಸ್ವರಾಜ್, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.
32. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು.
33. ನಿರ್ದೇಶಕರು, ಪೌರಾಡಳಿತ ಇಲಾಖೆ, ವಿಶ್ವೇಶ್ವರಯ್ಯ ಕಿರು ಗೋಪುರ, ಬೆಂಗಳೂರು.
34. ನಿರ್ದೇಶಕರು, ಯೋಜನೆ, ಉಸ್ತುವಾರಿ ಮತ್ತು ಮಾಹಿತಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
35. ನಿರ್ದೇಶಕರು, ಸಾಮಾಜಿಕ ಲೆಕ್ಕಪರಿಶೋಧನೆ ಇಲಾಖೆ, ಬೆಂಗಳೂರು.
36. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
37. ಸರ್ಕಾರದ ಉಪ ಕಾರ್ಯದರ್ಶಿಗಳು(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
38. ಜಂಟಿ ನಿರ್ದೇಶಕರು (ತೋಟಗಾರಿಕೆ/ತಾಂತ್ರಿಕ/ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
39. ಸಹಾಯಕ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
40. ಮುಖ್ಯ ಸಂಪಾದಕರು ಕರ್ನಾಟಕ ವಿಕಾಸ ಪತ್ರಿಕೆ. ಸದರಿ ಆದೇಶವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದು.
41. ವಿಶೇಷ ಅಧಿಕಾರಿ, ಗಣಕ ಯಂತ್ರ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್ ಪೋರ್ಟಲ್‌ನಲ್ಲಿ ಅಳವಡಿಸುವುದು.
42. ರಾಜ್ಯದ ಎಲ್ಲಾ ಜಿಲ್ಲೆಗಳ ಓಂಬುಡ್ಸ್‌ಮನ್‌ಗಳು ಮತ್ತು ರಾಜ್ಯ/ಜಿಲ್ಲೆಗಳ ಎಲ್ಲಾ ಗುಣ ನಿಯಂತ್ರಕರಿಗೆ.
43. ಹೆಚ್ಚಿನ ಪ್ರತಿಗಳು/ರಕ್ಷಾ ಕಡತಕ್ಕೆ.